## ಬಸ್ಸಿನಲ್ಲಿ ಶಿಕ್ಷಕರಲ್ಲ

ಅಂದು ಶಾಲೆಯಿಂದ ಮನೆಗೆ ಬಂದ ಕೋದಂಡರಾಮ ಅವರ ಮುಖದಲ್ಲಿ ಕೋಪವಿತ್ತು. 'ಯಾಕೆ? ಶಾಲೆಯಲ್ಲಿ ಗಲಾಟೆ ಆಯ್ತಾ?' ಪತ್ನಿ ಪಾರ್ವತಿ ಕೇಳಿದಳು. 'ಇಂದು ನಾನು ಬಸ್‌ನಲ್ಲಿ ನಿಂತುಕೊಂಡೇ ಬಂದೆ. ಸೀಟಿನಲ್ಲಿ ನಾಲ್ಕು ಜನ ವಿದ್ಯಾರ್ಥಿಗಳು ಕೂತಿದ್ದರು. ನನ್ನನ್ನು ನೋಡಿಯೂ ಸೀಟು ಬಿಟ್ಟು ಕೊಡಲಿಲ್ಲ' ಎಂದು ದೂರಿದರು. ಅದಕ್ಕೆ ಪತ್ನಿ ಹೇಳಿದಳು, 'ನೀವು ಶಾಲೆಯಲ್ಲಿ ಶಿಕ್ಷಕರು, ಬಸ್ಸಿನಲ್ಲಿ ಅಲ್ಲ'.

**ಸದಾನಂದ ಹೆಗಡೆ**





ಚಿತ್ರಗಳು: ಗಣೇಶ ಆಚಾರ್ಯ

## ಸಣ್ಣ ಆಪರೇಶನ್!

ತನ್ನ ಬೆನ್ನ ಮೇಲಿದ್ದ ಗಂಟಿನ ಆಪರೇಶನ್‌ಗೆ ಹೋಗಿದ್ದ ಗುಂಡ, ಅರ್ಧ ಗಂಟೆಯಲ್ಲಿ ಮನೆಗೆ ವಾಪಸ್ಸು ಬಂದ. ಆತನ ಹೆಂಡತಿ 'ಆಪರೇಶನ್ ಇಷ್ಟು ಬೇಗ ಮುಗಿಯಿತೇನ್ರಿ?' ಅಂದಳು. 'ಇಲ್ಲ, ಅಲ್ಲಿನ ನರ್ಸ್ ಪದೇ ಪದೇ ಹೆದರಬೇಡಿ. ಇದು ಚಿಕ್ಕ ಆಪರೇಶನ್. ಏನೂ ಆಗಲ್ಲ ಅಂತ ಹೇಳ್ತಾ ಇದ್ಲು. ಅದಕ್ಕೆ ಹೆದರಿಕೆಯಾಗಿ ಓಡಿ ಬಂದೆ' ಎಂದ. 'ರೀ, ಅವಳು ಸರಿಯಾಗಿಯೇ ಹೇಳಿದ್ದಾಳಲ್ಲ, ನೀವೇಕೆ ಹೆದರಿಕೊಂಡು ಬಂದ್ರಿ?' ಎಂದು ಕೇಳಿದಳು. 'ಆ ನರ್ಸ್ ಹಾಗೆ ಹೇಳುತ್ತಿದ್ದುದು ನನಗಲ್ಲ ಕಣೆ, ಡಾಕ್ಟರಿಗೆ' ಎಂದ ಗುಂಡ!

**ಶಂಕರೇಗೌಡ ತುಂಬಕೆರೆ**